ಶ್ರೀ ಅಲಂಗೂರು ಶ್ರೀನಿವಾಸ್ : ನಾನು clarification ಕೊಡುತ್ತೇನೆ. ತಾವು ಹೇಳಿದ ಹಾಗೆ, ಈಗಾಗಲೇ 125 ಜನರನ್ನು Horticultureನಿಂದ ಕೃಷಿ ಇಲಾಖೆಗೆ ತೆಗೆದುಕೊಂಡಿದ್ದಾರೆ. ನಾನು ಸಚಿವನಾಗಿದ್ದಾಗ ಹೋದ ವರ್ಷ ಪುನಃ ತೋಟಗಾರಿಕಾ ಇಲಾಖೆಗೆ ತೆಗೆದುಕೊಳ್ಳಬೇಕೆಂದು ಹೇಳಿ ಆದೇಶವನ್ನೂ ಹೊರಡಿಸಿದ್ದೆ. ಆದರೆ, ಆಗಿನ ಮಾನ್ಯ ಮುಖ್ಯಮಂತ್ರಿಗಳು ಆ ಆದೇಶವನ್ನು ತಡೆಹಿಡಿದು ಕೇವಲ $^{1}/_{3}^{rd}$ ಅನ್ನು ಈ ಇಲಾಖೆಗೆ ನೇಮಕ ಮಾಡಬೇಕೆಂದು ಆದೇಶ ಹೊರಡಿಸಿದ್ದರು. ಈ ಸಾರಿ 175 ಜನ ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ಪುನಃ ನಮ್ಮ ಇಲಾಖೆಗೆ ವಾಪಸ್ಸು ತಂದರೆ 40 percent ಆದರೂ ಅದನ್ನು fulfil ಮಾಡಬಹುದು ಎಂದು ನಾನು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ : ಈ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಅಲ್ಲ, ಅವರು ಮಂತ್ರಿಯಾದ ಮೇಲೆ ಹೇಳಿದ್ದರೆ ಚೆನ್ನಾಗಿತ್ತು. ಈಗ ಅಲ್ಲಿ ಪುಟ್ಟೇಗೌಡರು ಹೇಳುವುದಕ್ಕೆ ಉತ್ತರವಿತ್ತು. ಆದರೂ ನಾನು ಮಂತ್ರಿಯಲ್ಲ ಎಂದು ಕುಳಿತುಕೊಂಡೆ. ನೀವು ಮಂತ್ರಿಯೇ ಇಲ್ಲ ಏಕೆ ನೀವು ಉತ್ತರ ಹೇಳುತ್ತೀರಿ? ಸ್ವಲ್ಪ ಹೇಳಿ.

ಅಧ್ಯಕ್ಷರು : ಈಗ ಮಾವ ಬಾವಮೈದರು ಹೀಗೆ ಹೊಡೆದಾಡಿಕೊಂಡು ಕುಳಿತರೆ ಏನಪ್ಪ ಮಾಡುವುದು ನಾವು?

ಶ್ರೀ ಜಿ.ಎ. ಶ್ರೀರಾಮರೆಡ್ಡಿ : ಸಾರ್, ಈಗ ಮಂತ್ರಿ ಮಾಡಿ ಎಂದು ಹೇಳಿ.

ಅಧ್ಯಕ್ಷರು : ಆಯಿತು.

ಶ್ರೀ ಕೆ. ಶ್ರೀನಿವಾಸಗೌಡ : ನನಗೇನು ಸಂಬಂಧ? ಏನಿದ್ದರೂ ಶ್ರೀರಾಮರೆಡ್ಡಿಯವರು ಪೌರೋಹಿತ್ಯ ವಹಿಸುತ್ತಾರೆ.

ರಾಜೀವ್‌ಗಾಂಧಿ ಕುಡಿಯುವ ನೀರು ಪೂರೈಕೆಗೆ ತ್ವರಿತ ಮಂಜೂರಾತಿ

191 (621) ಶ್ರೀ ಸುರೇಶ್ ಎಸ್. ಮಾರಿಹಾಳ (ಕಿತ್ತೂರು) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜೀವ್‌ಗಾಂಧಿ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಕಿತ್ತೂರು ಹಾಗೂ ಇತರೆ 12 ಗ್ರಾಮಗಳ ಕುಡಿಯುವ ನೀರು ಪೂರೈಕೆ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆಯೇ;

ಆ) ಹಾಗಿದ್ದಲ್ಲಿ ಇದರ ಅಂದಾಜು ವೆಚ್ಚವೆಷ್ಟು;

ಇ) ಸದರಿ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ಯಾವಾಗ ನೀಡಲಾಗುವುದು;

ಈ) ತ್ವರಿತವಾಗಿ ಮಂಜೂರಾತಿ ನೀಡಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಸ್.ಎ. ರವೀಂದ್ರನಾಥ್ (ಸಕ್ಕರೆ ಸಚಿವರು) :

ಅ) ದಿನಾಂಕ: 29–12–2005 ರಂದು ನಡೆದ ರಾಜ್ಯ ಮಟ್ಟದ ಎಂಪವರ್ಡ್ ಸಮಿತಿ ಸಭೆಯಲ್ಲಿ ಕಿತ್ತೂರು ಮತ್ತು ಇತರೆ 12 ಗ್ರಾಮಗಳ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಸಬ್ ಮಿಷನ್ ಕಾರ್ಯಕ್ರಮದಡಿ ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಗಿದೆ.

ಆ) ಈ ಯೋಜನೆಯ ಅಂದಾಜು ಮೊತ್ತ ರೂ. 918.20 ಲಕ್ಷವಿದೆ.

ಇ) ಮತ್ತು ಈ) ಯೋಜನೆಯ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದ್ದು, ಸಚಿವ ಸಂಪುಟದ ಅನುಮೋದನೆ ಪಡೆದು ಆಡಳಿತಾತ್ಮಕ ಅನುಮೋದನೆ ನೀಡಲಾಗುವುದು.

ಶ್ರೀ ಸುರೇಶ್ ಎಸ್. ಮಾರಿಹಾಳ : ನಾನು ಕೇಳಿರುವ (ಅ) ಪ್ರಶ್ನೆಗೆ ಯೋಜನೆಯ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದ್ದು, ಸಚಿವ ಸಂಪುಟದ ಅನುಮೋದನೆ ಬೇಕಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದನ್ನು ಎಷ್ಟು ದಿವಸಗಳಲ್ಲಿ, ಎಷ್ಟು ತಿಂಗಳಲ್ಲಿ ಅಥವಾ ಎಷ್ಟು ವರ್ಷಗಳಲ್ಲಿ? ಕೊಡುತ್ತಾರೆ ಎನ್ನುವ ಬಗ್ಗೆ ಉತ್ತರವನ್ನು ಕೊಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರ ಮೂಲಕ ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಸ್.ಎ. ರವೀಂದ್ರನಾಥ್ : 918.20 ಲಕ್ಷದ ಅಂದಾಜು ಮೊತ್ತ ಇರುವುದರಿಂದ ಅದನ್ನು cabinetಗೆ ತಂದು ಅತೀ ಶೀಘ್ರವಾಗಿ ಮಂಜೂರು ಮಾಡಿಸಿಕೊಡುವ ವ್ಯವಸ್ಥೆಯನ್ನು ಮಾಡಿಸುತ್ತೇನೆ.

ಶ್ರೀ ಸುರೇಶ್ ಎಸ್. ಮಾರಿಹಾಳ : ಆದಷ್ಟು ತೀವ್ರವಾಗಿ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಎಸ್.ಎ. ರವೀಂದ್ರನಾಥ್ : ಪರಿಶೀಲನೆ ಮಾಡುತ್ತೇನೆ.

ಅವಧಿ ಪೂರ್ವ ವರ್ಗಾವಣೆ

192 (999) ಶ್ರೀ ಸಿ.ಎಸ್. ನಾಡಗೌಡ : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯಾದ್ಯಾಂತ ಕಾರ್ಯ ನಿರ್ವಹಿಸುತ್ತಿರುವ ಆಹಾರ ಶಿರಸ್ತೇದಾರರು ಹಾಗೂ ಆಹಾರ ನಿರೀಕ್ಷಕರುಗಳಲ್ಲಿ ಎಷ್ಟು ಜನರನ್ನು ಅವಧಿಪೂರ್ವ ವರ್ಗಾಯಿಸಲಾಗಿದೆ;

ಆ) ಈ ರೀತಿ ವರ್ಗಾಯಿಸಲು ಕಾರಣಗಳೇನು? ವಿವರಗಳನ್ನು ನೀಡುವುದು?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಈ ಇಲಾಖೆಯಲ್ಲಿ ಒಟ್ಟು 47 ಆಹಾರ ಶಿರಸ್ತೆದಾರರುಗಳ ವರ್ಗಾವಣೆಯನ್ನು ಮಾಡಲಾಗಿದ್ದು, ಅದರಲ್ಲಿ 33 ಅವಧಿಪೂರ್ವ ವರ್ಗಾವಣೆಯಾಗಿರುತ್ತದೆ.

ಈ ಇಲಾಖೆಯಲ್ಲಿ ಒಟ್ಟು 84 ಆಹಾರ ನಿರೀಕ್ಷಕರು/ಪ್ರ.ದ.ಸ. ಗಳನ್ನು ವರ್ಗಾವಣೆ ಮಾಡಲಾಗಿದ್ದು, ಅದರಲ್ಲಿ 41 ಅವಧಿ ಪೂರ್ವ ವರ್ಗಾವಣೆಯಾಗಿರುತ್ತದೆ.

ಆ) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ:4:ಸೇನೌವ:2006, ದಿನಾಂಕ: 10-4-2006ರಲ್ಲಿ ಅವಧಿಪೂರ್ವ ವರ್ಗಾವಣೆಗಳನ್ನು ಸಂಬಂಧಪಟ್ಟ ಸಚಿವರ ಅನುಮೋದನೆ ಪಡೆದು ಮಾಡಬಹುದೆಂದು ಆದೇಶಿಸಲಾಗಿದ್ದು, ಅದರಂತೆ ಈ ಇಲಾಖೆಯ ಆಹಾರ ಶಿರಸ್ತೇದಾರ್/ಆಹಾರ ನಿರೀಕ್ಷಕರುಗಳ 71 ಪ್ರಕರಣಗಳನ್ನು ಹಾಗೂ ಪತಿ ಪತ್ನಿ ಪ್ರಕರಣದಡಿ 3 ಅವಧಿಪೂರ್ವ ವರ್ಗಾವಣೆಗಳನ್ನು ಆಡಳಿತದ ಹಿತದೃಷ್ಟಿಯಿಂದ ಮಾಡಲಾಗಿದೆ.